

ಡಾ.ವಿನೋದ ಛೆಬ್ಬಿ

**ಒಂಟಿತನದ ನೋವು ಸಂಗಾತಿ ಕೊಡುವ ನೋವಿಗಿಂತಲೂ ಹೆಚ್ಚು ಅಸಹನೀಯ!**

# 88:ಅವಲಂಬನೆಯ ಹೆಸರಲ್ಲಿ..

ಲೋಚನ್ ಲೂಸಿ ತಮ್ಮ ಲೋಪದೋಷಗಳ ಸಹಿತ ಸಂಗಾತಿಯು ತನ್ನನ್ನು ಒಪ್ಪಿಕೊಳ್ಳಲಿ ಎಂದು ಆಗ್ರಹಿಸುತ್ತ, ಅದು ನಡೆಯದೆ ದಾಂಪತ್ಯ ಚಿಕಿತ್ಸೆ ಬಯಸಿದ್ದರು. ಅವರವರ ಲೋಪದೋಷಗಳನ್ನು ತಿದ್ದಿಕೊಳ್ಳುವ ಹೊಣೆ ಅವರದೇ, ಸಂಗಾತಿಯದಲ್ಲ ಎಂದು ಅರಿವು ಮಾಡಿಕೊಟ್ಟೆ. ಮುಂದೇನಾಯಿತು ಎಂದು ನೋಡೋಣ.

ಮುಂದಿನ ವಾರ ಲೂಸಿ, ಲೋಚನ್ ನನ್ನೆದುರು ಕುಳಿತಾಗ ಮುಂಚಿನ ಭೇಟಿಯಲ್ಲಿ ನಡೆದ ಚರ್ಚೆಯ ಬಗೆಗೆ ಏನಾದರೂ ಸಂದೇಹಗಳಿವೆಯೆ ಎಂದು ಕೇಳಿದೆ. ಲೋಚನ ತನ್ನ ಸಂದೇಹವನ್ನು ಮುಂದಿರಿಸಿದ. 'ನಾವು ಎಷ್ಟೊಂದು ಜಗಳ ಆಡಿದರೂ ಸ್ವಲ್ಪ ದಿನ ಕಳೆದಮೇಲೆ ಜಗಳ ಮರೆತು ಒಂದಾಗುತ್ತೇವೆ..' ಅದು ಹೇಗೆ ಎಂದು ತನ್ನನ್ನೇ ಪ್ರಶ್ನಿಸಿಕೊಂಡು, ನಂತರ ಗಟ್ಟಿಯಾಗಿ ಹೇಳಿದ: 'ನಾವು ಸುಮಾರು ಸಲ ಅಂದುಕೊಂಡಿದ್ದೇವೆ, ಬಿಟ್ಟುಬಿಡೋಣ ಅಂತ. ಆದರೂ ಒಟ್ಟಿಗಿದ್ದೇವೆ. ಇದು ನಾವು ಪ್ರೀತಿಸುತ್ತಿರುವುದರಿಂದ ತಾನೆ? ಪ್ರೀತಿ ನಮ್ಮನ್ನು ಬಂಧಿಸಿದೆ ಅಂತ ಅನ್ನಿಸುತ್ತಿದೆ.'

ನಾನು, 'ಲೋಚನ್, ಅದು ಪ್ರೀತಿಯಲ್ಲ ಅಂತ ಮುಂಚೆಯೇ ಮಾತಾಡಿಕೊಂಡೆವಲ್ಲ?' ಎನ್ನುವಷ್ಟರಲ್ಲಿ, 'ಅವಳು ನನಗೆ ನೋವು ಕೊಟ್ಟರೂ ನಾನು ಮತ್ತೆ ಅವಳ ಹತ್ತಿರ ಹೋಗುತ್ತೇನಲ್ಲ, ಅದು ಪ್ರೀತಿಯಿಂದ ಅಲ್ಲದೆ ಇನ್ನೇನು? ಪ್ರೀತಿ ಇಲ್ಲದಿದ್ದರೆ ದೂರವೇ ಉಳಿದುಬಿಡುತ್ತಿದ್ದೆ... ಆದರೆ ಇದನ್ನು ನೀವು ಪ್ರೀತಿಯೆಂದು ಒಪ್ಪೋದಿಲ್ಲ, ಅಲ್ಲವೆ?' ಎಂದು ಪ್ರಶ್ನಿಸಿದ.

ಪ್ರೀತಿ ಹಾಗೂ ಪರಾವಲಂಬನೆಯ ನಡುವಿನ ವ್ಯತ್ಯಾಸ ಲೋಚನನಿಗೆ ಮನದಟ್ಟಾಗಿಲ್ಲ. ಅದನ್ನಿನ್ನೂ ಸ್ಪಷ್ಟಪಡಿಸಬೇಕು ಎಂದು ಶುರುಮಾಡಿದೆ.

'ಲೋಚನ್ ಚಿಕ್ಕವರಿರುವಾಗ ನೆನಪಿಸಿಕೊಳ್ಳಿ. ನೀವು ಯಾವಾಗಲಾದರೂ ಸಿಟ್ಟು ಮಾಡಿಕೊಂಡು ಊಟ ಬಿಟ್ಟಿದ್ದಿರಬೇಕಲ್ಲವೆ? (ಹೌದೆಂದು ತಲೆ ಅಲ್ಲಾಡಿಸಿದ.) ಆಗ ನಿಮ್ಮಮ್ಮ ಏನು ಮಾಡುತ್ತಿದ್ದರು?' ಲೋಚನನ ಕಣ್ಣುಗಳು ಮೇಲಕ್ಕೆ ಹಾಗೂ ಎಡಕ್ಕೆ ತಿರುಗಿಕೊಳ್ಳುತ್ತ ಯಾವುದೋ ದೃಶ್ಯವನ್ನು ಕಾಣತೊಡಗಿದವು. ಕೌತುಕಭಾವ ಮುಖದ ತುಂಬ ಪಸರಿಸಿತು. 'ಹತ್ತಿರ ಬಂದು ಸಂತೈಸುತ್ತ ಬಾಯಿಗೆ ತುತ್ತು ಇಡುತ್ತಿದ್ದಳು. ನಾನು ಹಟ ಮಾಡುತ್ತ ಕೊಸರಿಕೊಳ್ಳುತ್ತಿದ್ದೆ. ಆದರೂ ಒತ್ತಾಯದಿಂದ ತಬ್ಬಿಕೊಂಡು ಸಮಾಧಾನ ಮಾಡುತ್ತಿದ್ದಳು.'

'ನಿಮ್ಮ ತಾಯಿ ನಿಮ್ಮನ್ನು ಸಂತೈಸಿದ ಹಾಗೆ ನೀವು ಯಾವೊತ್ತಾದರೂ ಲೂಸಿಯ ಕೋಪವನ್ನು ಅಲಕ್ಷಿಸಿ ಅನುಕಂಪ ತೋರಿಸಿ ಸಂತೈಸಿದ್ದೀರಾ?' ಅವನು ದಂಗಾಗಿ ಬಾಯಿ ತೆರೆದ. ಅಷ್ಟರಲ್ಲಿ ಲೂಸಿ ಸ್ವಲ್ಪ ಏರುಸ್ವರದಲ್ಲಿ ಬಾಯಿಹಾಕಿದಳು. 'ಸ್ಸಾರಿ ಫೊರ್ ಇಂಟ್ರೂಡಿಂಗ್. ಇವನು ಹಾಗೆ ಮಾಡಿದ್ದರೆ ನನಗೆ ಎಷ್ಟೋ ಹಾಯಾಗಿರುತ್ತಿತ್ತು. ಯಾವೊತ್ತೂ ಒಂದು ಸಲವಾದರೂ ಇಲ್ಲ. ಜಗಳ ಆಡುವಾಗ ಯಾವೊತ್ತೂ ಹತ್ತಿರ ಬರೋದಿಲ್ಲ. ನೆವ್ವರ್. ಲ್ಯಾಪ್‌ಟಾಪ್‌ನೊಳಗೆ ಕಣ್ಣು ಕೂರಿಸಿರುತ್ತಾನೆ. ಎಷ್ಟೇ ಬೈಯುತ್ತಿದ್ದರೂ ಬಾಯಿ ತೆರೆದರೆ ಕೇಳಿ!' ಅವಳ ಅವಹೇಳನ ಮುಗಿಯುವ ಮುಂಚೆ ಅವನು ಅವಳತ್ತ ಬಾಣ ಬಿಟ್ಟ. 'ಹಾಗೆ ಬಾಯಿತೆರೆದರೆ ಸಾಕು, ಇನ್ನಷ್ಟು ಬೈಯಲು ತಯಾರಾಗಿರ್ತೀಯಾ. ಮತ್ತೇನು ಕಾದಿದೆಯೋ ಅಂತ ಭಯ ಆಗುತ್ತದೆ.' ಎಂದು ಲೋಚನ ಸಮರ್ಥಿಸಿಕೊಂಡ.

ನನಗೇನೋ ಹೊಳೆಯಿತು. ಲೂಸಿಯನ್ನು ಉದ್ದೇಶಿಸಿ ಹೇಳಿದೆ: 'ಲೂಸಿ, ಲೋಚನ್ ನಿಮ್ಮನ್ನು ಸಂತೈಸಿದರೆ ಹಾಯಾಗಿರುತ್ತಿತ್ತು ಎಂದಿರಲ್ಲ, ಹಾಗೆಂದು ಅವರೊಡನೆ ನೇರವಾಗಿ ಹಂಚಿಕೊಂಡಿದ್ದೀರಾ?' ಲೂಸಿ ಸಿಕ್ಕಿಹಾಕಿಕೊಂಡಂತೆ ಗಲಿಬಿಲಿಗೊಂಡಳು. 'ನೀವೇನು ಬಯಸುತ್ತೀರಿ ಎಂಬುದನ್ನು ಸ್ವತಃ ಬಾಯಿಬಿಟ್ಟು ಹೇಳದ ಹೊರತೂ ಸಂಗಾತಿಗೆ ಗೊತ್ತಾಗುವುದಾದರೂ ಹೇಗೆ?... ಇಲ್ಲಿ ಇನ್ನೊಂದು ವಿಷಯವೂ ಇದೆ. ನಿಮ್ಮ ಮನಸ್ಸಿನೊಳಗೆ ಇರುವುದು ಗಂಡ ಸಂತೈಸಲಿ ಅಂತ. ಆದರೆ ಹೊರಗೆ ಅವರನ್ನು ಬೈಯುತ್ತಿದ್ದೀರಿ. ನೀನು ಬೇಕು ಎನ್ನುವವರು ನೀನು ಬೇಡ ಎನ್ನುವಂತೆ ವರ್ತಿಸುತ್ತಿದ್ದೀರಿ. ನಿಮ್ಮ ಸಂದೇಶದಲ್ಲಿ ವಿರೋಧಭಾವ ಇದೆಯಲ್ಲವೆ?' ಆಕೆ ಅರ್ಥಮಾಡಿಕೊಳ್ಳುತ್ತ ಹಿಂದೆ ಸರಿದಳು.

ಮತ್ತೆ ನಾನು ಲೋಚನನನ್ನು ಕೇಳಿದೆ. 'ನೀವು ಕೋಪಗೊಂಡಾಗ ನಿಮ್ಮಮ್ಮ ಹೆದರುತ್ತಿರಲಿಲ್ಲ. ಬೇಸರಪಟ್ಟುಕೊಳ್ಳುತ್ತಲೂ ಇರಲಿಲ್ಲ. ಹತ್ತಿರ ಬಂದು ಪ್ರೀತಿ ತೋರಿಸುತ್ತಿದ್ದರು. ಲೂಸಿಯ ವಿಷಯದಲ್ಲಿ ನೀವು ಯಾವ ಕಾರಣಕ್ಕೆ ಹಿಂದೇಟು ಹಾಕುತ್ತಿದ್ದೀರಿ? ಆಕೆಯ ಕೋಪಕ್ಕೆ? ನಿಜವಾಗಿಯೂ ಪ್ರೀತಿಸುತ್ತಿದ್ದರೆ ಆಕೆಯ ಕೋಪ ಯಾಕೆ ಅಡ್ಡಿಬರಬೇಕು? ನಾನು ಪ್ರೀತಿ ತೋರಿಸಲು, ಹತ್ತಿರವಾಗಲು ಬಯಸುತ್ತೇನೆ, ಆದರೆ ನಿನ್ನ ಕೋಪ ಅಡ್ಡಿಯಾಗುತ್ತದೆ ಎಂದು ಹೇಳಬಹುದಲ್ಲ, ಸ್ವಲ್ಪ ಯೋಚಿಸಿ?' ಅವನು ನಿರುತ್ತರನಾದ.

ಎರಡು ಕ್ಷಣ ನಿಲ್ಲಿಸಿ ಮತ್ತೆ ಮಾತಾಡಿದೆ. 'ಈಗ ಇನ್ನೊಂದು ಉದಾಹರಣೆ ತೆಗೆದುಕೊಳ್ಳಿ. ಎರಡು ವರ್ಷದ ಮುದ್ದುಮಗುವನ್ನು ಪ್ರೀತಿಸುವ ಅಮ್ಮ ಯಾವುದೋ ಕಾರಣಕ್ಕೆ ಏಟುಕೊಟ್ಟು ದೂರ ತಳ್ಳುತ್ತಿದ್ದಾಳೆ ಎಂದುಕೊಳ್ಳಿ. ಆಗ ಮಗುವು ಏನು ಮಾಡುತ್ತದೆ? ಆತ್ಮರಕ್ಷಣೆ ಮಾಡಿಕೊಳ್ಳಲು ಅಮ್ಮನಿಂದ ದೂರ ಸರಿಯುತ್ತದೆಯೆ? ಖಂಡಿತ ಇಲ್ಲ. ಬದಲಾಗಿ ಅಳುತ್ತ ಅಮ್ಮನ ಬೆನ್ನು ಹತ್ತುತ್ತದೆ. ನೋವು, ತಿರಸ್ಕಾರ ಆದರೂ ಅಮ್ಮನನ್ನು ತಬ್ಬಿಕೊಳ್ಳಲು ಹೋಗುತ್ತದೆ. ಕಾರಣವೇನು? ಮಗು ಅಮ್ಮನನ್ನು ತುಂಬಾ ಪ್ರೀತಿಸುತ್ತಿದೆ ಅಂತಲೆ?' ಇಬ್ಬರಿಗೂ ಗೊತ್ತಾಗಲಿಲ್ಲ. ವಿವರಿಸಿದೆ.

'ನಿಜವಾದ ಅರ್ಥದಲ್ಲಿ ಹೇಳಬೇಕೆಂದರೆ, ಇಲ್ಲಿ ಮಗು ತಾಯಿಯನ್ನು ಪ್ರೀತಿಸುತ್ತಿಲ್ಲ ಆದರೆ ಆಶ್ರಯಿಸುತ್ತಿದೆ. ಅವಲಂಬನೆ ಹೊಂದಿದೆ. ಅದು ಹೇಗೆ? ತಾಯಿ ಮಗುವಿಗೆ ಭದ್ರತೆಯನ್ನು ಕಲ್ಪಿಸಿಕೊಡುತ್ತಾಳೆ. ಹಾಗಾಗಿ ಮಗುವು – ಅದಕ್ಕೆ ಸ್ವಂತ ವ್ಯಕ್ತಿತ್ವ ಬೆಳೆದಿಲ್ಲ ಹಾಗಾಗಿ ತನ್ನ ಅಗತ್ಯಗಳಿಗಾಗಿ ತಾಯಿಯೊಡನೆ ಬೆಸುಗೆ ಹಾಕಿಕೊಂಡಿದೆಯಷ್ಟೆ. ಅಮ್ಮ ಹೊಡೆಯುವಾಗ ಮಗುವಿಗೆ ನೋವಾಗಿ ಅದು ದೂರ ಸರಿಯಬೇಕು. ಆದರೆ ನೋವಿನ ಮೂಲದಿಂದ ದೂರ ಹೋಗಬೇಕಾದರೆ ಭದ್ರತೆ ಕೊಡುವ ಮೂಲದಿಂದಲೂ ದೂರ ಹೋಗಬೇಕಾಗುತ್ತದೆ. ಹಾಗೆ ಹೋಗುವುದರಿಂದ ಒಂಟಿತನದ ಭಯ ಉಂಟಾಗುತ್ತದೆ. ಒಂಟಿತನದ ಭಯವು ನೋವಿನ ಭಯಕ್ಕಿಂತಲೂ ಹೆಚ್ಚು ಅಸಹನೀಯ. ಹಾಗಾಗಿಯೇ ನಾವೆಲ್ಲ ನೋವು ತಿಂದರೂ ಸರಿ, ಭದ್ರತೆ ಕೊಡುವ ವ್ಯಕ್ತಿಯ ಜೊತೆಗೆ ಇರುವುದನ್ನು ಆರಿಸಿಕೊಳ್ಳುತ್ತೇವೆ. ಹಾಗಾಗಿ ನೋವು ಕೊಡುವ ವ್ಯಕ್ತಿಯನ್ನು ಬಿಟ್ಟುಹೋಗದೆ ಒಟ್ಟಿಗಿರುವುದು ಪ್ರೀತಿಯ ಲಕ್ಷಣವಲ್ಲ. ಅನಿವಾರ್ಯ ಅವಲಂಬನೆಯ ಲಕ್ಷಣ. ಒಂಟಿತನದಿಂದ ತಪ್ಪಿಸಿಕೊಳ್ಳುವ ಪ್ರಯತ್ನದ ಲಕ್ಷಣ.'

ಲೋಚನನ ಮುಖದ ಮೇಲಿನ ಪ್ರಶ್ನಾರ್ಥಕ ಚಿಹ್ನೆ ಮಾಯವಾಯಿತು. 'ಓಹೋ, ಗೊತ್ತಾಯಿತು ಬಿಡಿ!' ಎನ್ನುತ್ತ ಲೋಚನ್ ಲೂಸಿಯ ಕಡೆಗೆ ಒಂದು ಸಲ ದೃಷ್ಟಿಹಾಯಿಸಿ, ಸೋಫಾದಲ್ಲಿ ಆರಾಮವಾಗಿ ಒರಗಿ ಕೂತುಕೊಂಡ.

ನಾನು ಲೂಸಿಗೆ ಕೇಳಿದೆ: 'ಲೂಸಿ, ನಿಮಗೇನಾದರೂ ಕೇಳುವುದಿದೆಯೆ?' ಆಕೆ ಏನು ಕೇಳಿದಳೆಂದು ಮುಂದಿನ ವಾರ ನೋಡೋಣ.

ಸೂಚನೆ: ಓದುಗರು ತಮ್ಮ ಸಮಸ್ಯೆಗಳಿಗೆ ಸಲಹೆ ಬಯಸಿದಲ್ಲಿ ಪತ್ರವನ್ನು ಬರೆಯಬಹುದು. ವಿಳಾಸ: ಸುಖೀ ದಾಂಪತ್ಯ ವಿಭಾಗ, ಸುಧಾ ವಾರಪತ್ರಿಕೆ, 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು 01 ಉಚಿತ ಸಹಾಯವಾಣಿಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: 8050255229 (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: 8494944888 (ಬೆಳಿಗ್ಗೆ 11ರಿಂದ ಸಂಜೆ 5ರ ತನಕ) ಲೇಖಕರ ವಿಳಾಸ: www.medisex.org